2018 IV 12 | 0930 | Seat No. : [ ][ ][ ][ ][ ]

Time : 2½ Hours

**KANNADA (T.L.) (New)**

**Subject Code**

| S | 0 | 1 | 3 | 6 |
|---|---|---|---|---|

**Total No. of Questions : 10** **(Printed Pages : 7)** **Maximum Marks : 80**

*ಸೂಚನೆಗಳು : i) ಪ್ರತಿಯೊಂದು ಪ್ರಶ್ನೆಯನ್ನು **ಒಂದು ಹೊಸ** ಪುಟದ ಮೇಲೆ ಬರೆಯಿರಿ.*

*ii) ಪ್ರತಿ ಪ್ರಶ್ನೆಯ ಸಂಖ್ಯೆ ಮತ್ತು ಉಪಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.*

*iii) ಎಲ್ಲಾ ಪ್ರಶ್ನೆಗಳನ್ನು ಬಿಡಿಸುವುದು **ಆವಶ್ಯವಾಗಿದೆ.***

1\. ಅ) ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ **ಒಂದನ್ನು** ಆರಿಸಿ ವಾಕ್ಯ ಪೂರ್ಣ ಮಾಡಿ ಬರೆಯಿರಿ. **[2]**

1) ರೇಷ್ಮೆ ಹುಳುಗಳು ಜೊಲ್ಲಿನ ಎಳೆಗಳನ್ನು ಬಿಡುತ್ತಾ ತನ್ನ ಮೈ ಸುತ್ತಲೂ ಸುತ್ತಿದ್ದ ಗೂಡನ್ನು5 ದಿನಗಳಲ್ಲಿ ಬಿಸಿನೀರಿನಲ್ಲಿ ಹಾಕಲೇಬೇಕಾಗುತ್ತದೆ. ಏಕೆಂದರೆ

i) ಆ ಗೂಡಿನಲ್ಲೇ ಹುಳುಗಳು ಸತ್ತು ಕೊಳೆಯುತ್ತವೆ

ii) ಗೂಡಿನೊಳಗಿದ್ದ ಕೀಡೆಯು ಪತಂಗವಾಗಿ ಗೂಡನ್ನು ಕತ್ತರಿಸಿ ಹೊರಬರುತ್ತದೆ

iii) ಗೂಡು ಒಣಗಿ ಗಟ್ಟಿಯಾಗುತ್ತದೆ

2) ಯಂಕಣ್ಣನು ಮಾವನ ಊರಿಗೆ ಬರುತ್ತಿರುವಾಗ ಸಾಹುಕಾರ ಭೀಮಣ್ಣ ನೆಲದೊಳಗಿನ ಹಗೆಯ ಬಾಯಿಯನ್ನು ತೆಗೆದು ಬಿಟ್ಟಿದ್ದನು. ಏಕೆಂದರೆ

i) ಹಗೆಯಲ್ಲಿ ಜೋಳವನ್ನು ತುಂಬಿಡಲು ವಿಚಾರಿಸಿದ್ದನು

ii) ಹಗೆಯಲ್ಲಿಟ್ಟಿದ್ದ ಜೋಳವನ್ನು ಹೊರತೆಗೆಯಲು ಬಯಸಿದ್ದನು

iii) ಹಗೆಯಲ್ಲಿ ಮಣ್ಣು ಹಾಕಿ ಮುಚ್ಚಿಡಲು ಯೋಚಿಸಿದ್ದನು

ಬ) ಕೆಳಗಿನ ಬೇಕಾದ **ನಾಲ್ಕು** ಮಾತುಗಳನ್ನು ಯಾರು– ಯಾರಿಗೆ ಹೇಳಿದರು ಬರೆಯಿರಿ : **[4]**

i) ''ನಿಮಗೆಲ್ಲಾ ನಮ್ಮ ಬ್ಯಾಂಕಿನ ವತಿಯಿಂದ ಆದರದ ಸ್ವಾಗತ''

ii) ''ಹೋಗಿ ಅಳಿಯಂದಿರೇ ! ನನಗೇನೂ ಕೋಪವಿಲ್ಲ ಹೋಗಿ ಮಲಗಿಕೊಳ್ಳಿ''

iii) ''ಏನು ! ಪುಸ್ತಕದಲ್ಲಿ ಬಂಗಾರ ಸಿಗುತ್ತದೆಯೇ ?''

iv) ''ಅಬ್ಬಾ! ಅದ್ಭುತವಾಗಿದೆ ರೇಷ್ಮೆ ತಯಾರಿಕೆಯ ವಿಧಾನ''

v) ''ನಿಮ್ಮ ಆಫೀಸಿನಲ್ಲಿ ರಮೇಶ ಕೂಡ ನಿಮ್ಮ ಹಾಗೆ ಗುಮಾಸ್ತ ತಾನೆ !''

ಕ) ಈ ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ : **[4]**

1) ಎ.ಟಿ.ಎಮ್. ಅಂದರೇನು ?

2) ವಲ್ಲಭಭಾಯಿಯವರನ್ನು ಉಕ್ಕಿನ ಮನುಷ್ಯ ಎಂದು ಏಕೆ ಕರೆಯುತ್ತಾರೆ ?

3) ರೇಷ್ಮೆ ಹುಳುಗಳ ಆಹಾರ ಯಾವುದು ?

4) ಯಾವ ಅಧಿಕಾರಿಗಳಿಗೆ ರಮೇಶನ ಮೇಲೆ ಅನುಮಾನ ಬಂದಿತು ?

5) ವಾಯುಮಂಡಲದಲ್ಲಿರುವ ಮುಖ್ಯ ಅನಿಲಗಳಾವುವು ?

2. ಅ) ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿಯ ಯೋಗ್ಯವಾದ **ಒಂದನ್ನು** ಆರಿಸಿ ಈ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ : **[2]**

i) ಸಾಬ್ರಿ ವಿಮಾನಗಳು _________ ನಗರದ ಮೇಲೆ ದಾಳಿ ಮಾಡಿದವು.

(ಶ್ರೀನಗರ, ಗುಜರಾತ, ಪಂಜಾಬ)

ii) ರಸಭರಿತ ರೇಷ್ಮೆಹುಳಗಳನ್ನು_____________ ಯಲ್ಲಿ ಹಾಕುತ್ತಾರೆ.

(ಮಡಿಕೆ, ಚಂದ್ರಿಕೆ, ಪೆಟ್ಟಿಗೆ )

iii) ಅಶೋಕನು ________ ಧರ್ಮವನ್ನು ಸ್ವೀಕರಿಸಿದನು.

(ಹಿಂದು, ಕ್ರೈಸ್ತ , ಬೌದ್ಧ)

iv) ರಮೇಶನು _________ ರೂಪಾಯಿಗಳನ್ನು ರಾಜುವಿನ ಮನೆಯಲ್ಲಿ ಇಡಲು ಬಂದಿದ್ದನು.

(ಸಾವಿರ, ಲಕ್ಷ, ಹತ್ತು ಸಾವಿರ)

ಬ) ಈ ಕೆಳಗಿನ **ಮೂರು** ಪ್ರಶ್ನೆಗಳಿಗೆ **ಮೂರು-ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[9]**

1) ಶಂಕರನ ತಂದೆ ಕೈತೋಟದಲ್ಲಿರುವ ಬಂಗಾರದ ಗಣಿಯನ್ನು ಯಾವ ಮಾತುಗಳಿಂದ ಸಮರ್ಥಿಸಿದನು ?

2) ಅಶೋಕನು ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದನು ?

3) ಬಿಷ್ಟಪ್ಪಯ್ಯನ ಗೋಪುರವೆಂದು ಯಾವುದಕ್ಕೆ ಕರೆಯುವರು ?

4) ಜಲಪಾತದ ನಾಲ್ಕು ಕವಲುಗಳು ಯಾವುವು ? ಪ್ರತಿಯೊಂದರ ವಿಶೇಷತೆಯನ್ನು ಒಂದೆರಡು ವಾಕ್ಯದಲ್ಲಿ ಬರೆಯಿರಿ.

ಕ) ಕೆಳಗಿನ ಬೇಕಾದ **ಒಂದು** ಪ್ರಶ್ನೆಗೆ **ನಾಲ್ಕು-ಐದು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[4]**

1) ವಲ್ಲಭಭಾಯಿಯವರ ಶಿಕ್ಷಣ ಮತ್ತು ವಕೀಲವೃತ್ತಿಯ ಬಗ್ಗೆ ಬರೆಯಿರಿ.

2) ಜಲಮಾಲಿನ್ಯ ಯಾವ ಯಾವ ಕಾರಣಗಳಿಂದಾಗುತ್ತದೆಂಬುದನ್ನು ಬರೆಯಿರಿ.

3. ಅ) ಕೆಳಗಿನ ಶಬ್ದಗಳ ಅರ್ಥ ಬರೆಯಿರಿ : **[2]**

i) ನಿಕ್ಷೇಪ

ii) ಅಧಿಪತ್ಯ

iii) ಕುರುಹು

iv) ಪರಮಾಣು

ಬ) ಕೆಳಗಿನ ಶಬ್ದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ : **[2]**

i) ಮನಮೋಹಕ

ii) ಸಂಶೋಧನೆ.

ಕ) ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣ ಗುರುತಿಸಿ ಬರೆಯಿರಿ : **[2]**

i) ರಾಧಾಳು ಇಂಪಾಗಿ ಹಾಡುತ್ತಾಳೆ.

ii) ಸೂರ್ಯೋದಯವು ನೋಡಲು ಸೊಗಸಾಗಿದೆ.

iii) ದೆಹಲಿಯು ಒಂದು ದೊಡ್ಡ ಪಟ್ಟಣವಾಗಿದೆ.

iv) ಹರಿಶ್ಚಂದ್ರನು ಸತ್ಯವಂತ ರಾಜನಾಗಿದ್ದನು.

ಡ) ಕೆಳಗಿನ ಶಬ್ದಗಳ ಸಂಧಿ ವಿಗ್ರಹಿಸಿ ಬರೆಯಿರಿ : **[2]**

i) ಹಳೆಗನ್ನಡ

ii) ಅತ್ಯುತ್ತಮ

iii) ಚಂದ್ರೋದಯ

iv) ರೂಪಾಂತರ.

4. ಅ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ : **[4]**

1) ಮಗುವಿನ ಮನದಲ್ಲಿ ಏನು ಅರಳುತ್ತಿದೆ ?

2) ವಿಜ್ಞಾನವು ಯಾವುದನ್ನು ಗೆಲ್ಲುತ್ತದೆ ?

3) ಅಂಬಿಗನಿಗೆ ಬಿದಿರು ಯಾವ ರೀತಿಯಲ್ಲಿ ಸಹಾಯ ಮಾಡುತ್ತದೆ ?

4) ಕನ್ನಡ ನುಡಿ ಹೇಗಿದೆ ?

5) ಯಾವ ಯಾವ ಧರ್ಮಗಳ ಮಹಾನ್ ಸಾಗರ ನಮ್ಮ ದೇಶದಲ್ಲಿದೆ ?

ಬ) ಕೆಳಗಿನ ಬೇಕಾದ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : **[4]**

1) ಭೂಮಿಯಲ್ಲಿ ಎಂತಹ ಎರಡು ಗುಣಗಳ ಜನರಿದ್ದಾರೆ ?

2) ಭೂಮಿಯು ಭತ್ತದ ಗದ್ದೆಯಲ್ಲಿ ಬಿದ್ದರೆ ಏನಾಗುತ್ತದೆ ?

3) ''ಶ್ರೀ ಕೃಷ್ಣನ ನಾಮವು ಉತ್ತಮ ಸರಕಿದು ಅತಿಲಾಭ ಬರುವಂತಹದ್ದು'' ಎಂದು ಪುರಂದರದಾಸರು ಏಕೆ ಹೇಳಿದ್ದಾರೆ ?

5. ಅ) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ : **[2]**

i) ಧನಿಕರು

ii) ಹಳ್ಳಿಗಳು

iii) ಗಿಣಿ

iv) ನನ್ನ

ಬ) ಕೆಳಗಿನ ಶಬ್ದಗಳ ಲಿಂಗ ಬದಲಿಸಿ ಬರೆಯಿರಿ : **[2]**

i) ದೊಡ್ಡಪ್ಪ

ii) ದಾಸ

iii) ಅಧ್ಯಾಪಕಿ

iv) ಹಾಡುಗಾರ

ಕ) ಕೆಳಗಿನ ಶಬ್ದಗಳ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ : **[2]**

i) ಕಿರಿದು

ii) ಶುಭ

iii) ಸಮಾಧಾನ

iv) ಅನುಕೂಲ

ಡ) ಕೆಳಗಿನ ಬೇಕಾದ **ಎರಡು** ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ : **[2]**

i) ಮಾಡಿದುಣ್ಣೋ ಮಹಾರಾಯ

ii) ಅಪಾಯ ಬಂದಾಗ ಉಪಾಯ ಇರಬೇಕು

iii) ಆಚಾರವೇ ಸ್ವರ್ಗ ಅನಾಚಾರವೇ ನರಕ

ಇ) ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ : **[2]**

i) ಜಲ

ii) ಅಡವಿ

iii) ಸುವರ್ಣ

iv) ಶಿವ

6. ಕೆಳಗಿನವುಗಳಲ್ಲಿ ಯಾವುದೇ **ಒಂದು** ವಿಷಯದ ಕುರಿತು **ಹದಿನೈದು-ಇಪ್ಪತ್ತು** ವಾಕ್ಯಗಳಲ್ಲಿ ನಿಬಂಧ ಬರೆಯಿರಿ : **[6]**

i) ನಾನು ವೈದ್ಯನಾದರೆ . . .

ii) ನಾನು ಕಂಡ ವಸ್ತು ಪ್ರದರ್ಶನ

iii) ಸಂಗಣಕದ ಆತ್ಮಕತೆ

iv) ವಿಜ್ಞಾನದಿಂದಾಗುವ ಲಾಭ ಹಾನಿ

v) ಸ್ವಾಮಿ ವಿವೇಕಾನಂದ.

7. ಕೆಳಗಿನ ವಾಕ್ಯಾಂಶಗಳ ಸಹಾಯದಿಂದ **ಒಂದು** ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯ ತಲೆಬರಹ ನೀಡಿರಿ. **[6]**

ಒಂದು ಊರಿನಲ್ಲಿ ಮೊಸಳೆ ಮತ್ತು ಮಂಗ . . . . . . . ಒಂದು ಸರೋವರ . . . . . . . ಮರದ ಮೇಲೆ ಮಂಗನ ವಾಸ . . . . . . . ಮೊಸಳೆ ಮಂಗಗಳ ಗೆಳೆತನ . . . . . . . ಒಂದು ದಿನ ಮೊಸಳೆಗೆ ಮಂಗನ ಹೃದಯ ತಿನ್ನುವ ಆಸೆ . . . . . . . ಊಟಕ್ಕೆ ಮೊಸಳೆಯ ಆಮಂತ್ರಣ . . . . . . . ಮೊಸಳೆಯ ಬೆನ್ನ ಮೇಲೆ ಮಂಗ . . . . . . . ಜಾಣ ಮಂಗ ಹೃದಯ ಗಿಡದ ಮೇಲೆ ಇದೆ ಎಂದಿತು . . . . . . . ಮಂಗ ಚಂಗನೆ ಗಿಡಕ್ಕೆ ಹಾರಿತು . . . . . . . ಮೊಸಳೆಗೆ ಪಶ್ಚಾತ್ತಾಪ.

8. ಕೆಳಗಿನ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ **ಒಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ :

ಕನ್ನಡ ಸಾಹಿತ್ಯ ಲೋಕದ ವಿಸ್ಮಯ ಎಂದು ವರ್ಣಿಸಿರುವ ಕೋಟ ಶಿವರಾಮಕಾರಂತರದು ಒಂದು ಅಸದೃಶ ಪ್ರತಿಭೆ. ಅವರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಟ ಗ್ರಾಮದಲ್ಲಿ 1902ರ ಅಕ್ಟೋಬರ್ 10ರಂದು ಜನಿಸಿದರು. ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ. ಬಾಲ್ಯದಲ್ಲಿ ಕಾರಂತರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದು ಇವರ ತಾಯಿ, ಅಜ್ಜಿ ಮತ್ತು ಹುಟ್ಟಿದ ಕೋಟ ಗ್ರಾಮದ ಸುಂದರ ಪರಿಸರ.

ಕಾರಂತರ ಬಾಲ್ಯದ ವಿದ್ಯಾಭ್ಯಾಸ ಕೋಟದಲ್ಲಿ ನಡೆಯಿತು. ಕಾರಂತರು ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಪ್ರೌಢಶಿಕ್ಷಣಕ್ಕೆ ಕುಂದಾಪುರ ಶಾಲೆಗೆ ಸೇರಿದರು. ಕಾರಂತರಿಗೆ ಮೊದಲಿನಿಂದಲೂ ಪಾಠಗಳನ್ನು ಓದುವುದು, ಕಂಠಪಾಠ ಮಾಡುವುದೆಂದರೆ ಅಷ್ಟಕಷ್ಟೇ. ಅವರ ಮನೆಯಲ್ಲಿ ನಿತ್ಯವೂ ಭಾಗವತ ವಾಚನ ನಡೆಯುತ್ತಿತ್ತು. ಯಕ್ಷಗಾನ, ಬಯಲಾಟಗಳು ಅವರಿಗೆ ಬಾಲ್ಯದಲ್ಲಿ ಪ್ರಿಯವಾಗಿದ್ದವು. ಕುಂದಾಪುರದಲ್ಲಿ ಪ್ರೌಢಶಿಕ್ಷಣ ಮುಗಿಸಿದ ನಂತರ ಕಾರಂತರು ಕಾಲೇಜು ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಶಾಲೆಯನ್ನು ಸೇರಿದರು. ಕಾಲೇಜಿನ ವಾಚನಾಲಯದಲ್ಲಿ ಕಾರಂತರು ಹಲವು ಆಂಗ್ಲ ಪುಸ್ತಕಗಳನ್ನೂ ಓದಿದರು. ರವೀಂದ್ರನಾಥ್ ಟಾಗೂರರ ಬಹಳಷ್ಟು ಪುಸ್ತಕಗಳನ್ನು ಕಾರಂತರು ಓದಿ ಮುಗಿಸಿದರು. ಇವುಗಳ ಪ್ರಭಾವದಿಂದ ಕಾಲೇಜಿನ ಶಿಕ್ಷಣ ಅಷ್ಟೊಂದು ರುಚಿಸಲಿಲ್ಲ.

ಪ್ರಶ್ನೆಗಳು :

i) ಶಿವರಾಮ ಕಾರಂತರು ಎಷ್ಟರಲ್ಲಿ ಜನಿಸಿದರು ? **[1]**

ii) ಬಾಲ್ಯದಲ್ಲಿ ಕಾರಂತರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಅಂಶಗಳಾವುವು ? **[1]**

iii) ಕಾರಂತರು ಪ್ರಾಥಮಿಕ ಶಿಕ್ಷಣವನ್ನು ಎಲ್ಲಿ ಮುಗಿಸಿದರು ? **[1]**

iv) ಕಾರಂತರಿಗೆ ಯಾವುದೆಂದರೆ ಅಷ್ಟಕಷ್ಟೇಯಾಗಿತ್ತು ? **[1]**

v) ಯಾವುದರಿಂದ ಕಾರಂತರಿಗೆ ಕಾಲೇಜಿನ ಶಿಕ್ಷಣ ಅಷ್ಟೊಂದು ರುಚಿಸಲಿಲ್ಲ? **[1]**

9. ಪತ್ರ : **[6]**

ರಾಮು/ರಮಾ ಯಾದವ, ಮನೆ ನಂ. 45, ಶಾಸ್ತ್ರಿನಗರ, ನ್ಯೂವಾಡಾ, ವಾಸ್ಕೋ ಇವನು/ಇವಳು ತನ್ನ ಗೆಳೆಯ/ಗೆಳತಿ ಇವರಿಗೆ ದೀಪಾವಳಿ ಹಬ್ಬದ ಶುಭಾಶಯಗಳನ್ನು ತಿಳಿಸುತ್ತಾ ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

**ಅಥವಾ**

ಮೊರಪಿಲ್ಲಾ ಪಾತೋರ್ಪಾ ಕುಕ್ಕಳ್ಳಿಯ ನಾಗರೀಕರು ತಮ್ಮ ಹಳ್ಳಿ ಬಹಳ ಹಿಂದುಳಿದಿದೆ. ನಮ್ಮ ಹಳ್ಳಿಯಲ್ಲಿ ಒಂದು ಪ್ರೌಢ ಶಾಲೆಯನ್ನು ನಿರ್ಮಿಸಿಕೊಡಬೇಕೆಂದು ಜಿಲ್ಲಾಧಿಕಾರಿ, ದಕ್ಷಿಣ ಗೋವಾ ಇವರಿಗೆ ಮನವಿ ಪತ್ರ ಬರೆಯುವ ಮಾದರಿಯಲ್ಲಿ ಪತ್ರ ಬರೆಯಿರಿ.

10. ಕೆಳಗಿನ **ಎರಡು** ಕವಿತೆಗಳ ಸರಳ ಅರ್ಥ ಬರೆಯಿರಿ :

ಅ) ಕಣವನು ಕಡಿಯುತ ನೀರನು ಹೊಡೆಯುತ [3]
ಮೇಟಿಯ ಕುಣಿಯಲು ಅಗೆಯುವರು
ತೆನೆಯನು ಮುರಿಯುತ ಹಾಡನು ಹೇಳುತ
ಗುಂಪಿಯ ನೆಳೆಯುತ ಒಗೆಯುವರು

ಬ) ಆಡಾಡು ಬಾನವಿಲೆ ತೆರೆದೆರಡು ಸಾವಿರದೆರಡು ಕಣ್ಣ [3]
ಪಚ್ಚೆಗರಿಗಳ ನಡುವೆ ರತ್ನದೆಳೆಯಿಟ್ಟ ಕಣ್ಣ
ತೋಟ ಸಿರಿವಂತನದು ಹೂವು ಬಳ್ಳಿಯದು
ನಾನು ಮಾತ್ರವೇ ಇಲ್ಲಿ ನಮ್ಮದಾಗಿಹೆನು
ಆಡು ಬಾ ನವಿಲೆ ಈ ಹೂ ಬನದ ನಡುವೆ

---